1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ | ಪಿ.ಡಬ್ಲ್ಯೂ | 2 |
| ತಂದೆಯ ಹೆಸರು | ಮುತ್ತು | ಸಿ.ಡಬ್ಲ್ಯೂ | 11 |
| ವಯಸ್ಸು | 25 ವರ್ಷ | | |
| ಉದ್ಯೋಗ | ಸೆಂಟ್ರಿ ಕೆಲಸ | | |
| ವಾಸಸ್ಥಳ | ಕಣಬೂರು ಗ್ರಾಮ, ನ.ರಾ.ಪುರ | | |

ದಿಃ 30-11-2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. 1 ನೇ ಆರೋಪಿ ಮತ್ತು ಚಾಸಾ.10 ರವರು ನನಗೆ ಯಾರೆಂದು ಗೊತ್ತಿಲ್ಲ. ಈಗ ನೋಡಿದ ದಾಖಲೆಗೆ ಸುಮಾರು 3 ವರೆ ವರ್ಷಗಳ ಹಿಂದೆ ಮಹಜರಿಗೆ ಬೇಕು ಎಂದು ಹೇಳಿ ಈಗ ತೋರಿಸಿದ ದಾಖಲೆಗೆ ನನ್ನ ಸಹಿಯನ್ನು ಪಡೆದಿದ್ದರು. ಯಾವ ವಿಚಾರಕ್ಕೆ ಮಹಜರ್ ನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ. ಸಾಕ್ಷಿಯ ಸಹಿ ಇರುವ ಮಹಜರ್ ನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿತ್ತು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

2. ಈಗ ತೋರಿಸಿದ ಫೋಟೋದಲ್ಲಿ ಕಾಣುತ್ತಿರುವ ಬೈಕ್ ನ್ನು ನೋಡಿಲ್ಲ. ಸಾಕ್ಷಿಗೆ ತೋರಿಸಿದ ಫೋಟೋಗಳನ್ನು ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನಾನು ಕಾಣುತ್ತಿದ್ದೇನೆ. ನನ್ನ ಜೊತೆ ಇರುವವರು ಯಾರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಮಹಜರಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 19-02-2018 ರಂದು ಸಂಜೆ 5.40 ಗಂಟೆಗೆ ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಚಾಸಾ.1 ಮತ್ತು ಆರೋಪತರ ಮಧ್ಯೆ ಆದ ಗಲಾಟೆಯ ಸಂಬಂಧ 1 ನೇ ಆರೋಪಿ ಹಾಜರುಪಡಿಸಿದ ಕೆ ಎ 18 ಇ ಬಿ 0912 ಸ್ಪ್ಲೆಂಡರ್ ಬೈಕ್ ನ್ನು ಅಮಾನತುಪಡಿಸಿಕೊಂಡು ನನ್ನ ಮತ್ತು ಚಾಸಾ.10 ರವರ ಸಮಕ್ಷಮ ನಿಪಿ.1 ರಂತೆ ಮಹಜರ್ ನ್ನು ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ 1 ನೇ ಆರೋಪಿ ಮತ್ತು ಚಾಸಾ.10 ರವರು ಸಹಿಗಳನ್ನು ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ ಎಸ್ ಟಿ ವಕೀಲರಿಂದಃ</u>

**SPL.C.NO: 83/2018**
**P.W.1**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಶಾಂತಣ್ಣ ಆಳ್ವ ಎಂ )
C/c 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.